ಸರ್ಕಾರದ ಎನ್‌ಡಿಆರ್‌ಎಫ್/ಎಸ್‌ಡಿಆರ್‌ಎಫ್ ಮಾರ್ಗಸೂಚಿ ಪ್ರಕಾರ ₹ 226.00 ಲಕ್ಷಗಳ ಪರಿಹಾರ ವಿತರಿಸಲಾಗಿದೆ.

**ಸಮರ್ಪಕ ಪುನರ್ ವಸತಿ ಕಲ್ಪಿಸದಿರುವುದು**

**906 (788); ಡಾ॥ ಉಮೇಶ್ ಜಿ. ಜಾಧವ್ (ಚಿಂಚೋಳಿ)**

ಅ) ಚಿಂಚೋಳಿ ತಾಲ್ಲೂಕಿನ ಮುಲ್ಲಾಮಾರಿ ಕೆಳದಂಡೆ ಯೋಜನೆಯ ಜಲಾಶಯದಲ್ಲಿ ಮುಳುಗಡೆಯಾದ ಗಡಿಲಿಂಗದಳ್ಳಿ, ಯಲ್ಲಾಮಡಿ, ಚನ್ನೂರು ಗ್ರಾಮಸ್ಥರಿಗೆ ಸಮರ್ಪಕ ಪುನರ್ ವಸತಿ ಕಲ್ಪಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು? (ವಿವರ ನೀಡುವುದು)

**ಶ್ರೀ ಎಂ.ಬಿ. ಪಾಟೀಲ್ (ಮಾನ್ಯ ಜಲ ಸಂಪನ್ಮೂಲ ಸಚಿವರು)**

ಅ) ಚಿಂಚೋಳಿ ತಾಲ್ಲೂಕಿನ ಮುಲ್ಲಾಮಾರಿ ಯೋಜನೆಯ ಜಲಾಶಯದಲ್ಲಿ ಮುಳುಗಡೆಯಾದ ಗಡಿಲಿಂಗದಳ್ಳಿ, ಯಲಮಾಮಡಿ, ಚನ್ನೂರು ಗ್ರಾಮಸ್ಥರಿಗೆ ಅನುಮೋದಿತ ಲೇಔಟನಂತೆ ಪುನರ ವಸತಿ ಕಲ್ಪಿಸಲಾಗಿದೆ.

ಆ) ಚಿಂಚೋಳಿ ತಾಲ್ಲೂಕಿನ ಕೆಳದಂಡೆ ಮುಲ್ಲಾಮಾರಿ ಯೋಜನೆಯ ಜಲಾಶಯದಲ್ಲಿ ಮುಳುಗಡೆಯಾದ ಗಡಿಲಿಂಗದಳ್ಳಿ, ಯಲಮಾಮಡಿ, ಚನ್ನೂರ ಗ್ರಾಮಸ್ಥರಿಗೆ ಅನುಮೋದಿತ ಲೇಔಟನಂತೆ ಪುನರ ವಸತಿ ಕಲ್ಪಿಸಲಾಗಿದೆ. ವಿವರಗಳು ಕೆಳಗಿನಂತಿವೆ:–

<u>ಗಡಿಲಿಂಗದಳ್ಳಿ:– ಕೇಂದ್ರ 1 ಮತ್ತು 2:–</u> ಸದರಿ ಕೇಂದ್ರದ ಪುನರ ವಸತಿ ಕಾಮಗಾರಿಗಳು 2000 ಪೂರ್ವದಲ್ಲಿ ಅನುಮೋದಿತ "ಲೆಔಟ" ನಂತೆ ಪೂರ್ಣಗೊಂಡಿದ್ದು ನಿರಾಶ್ರಿತರು 2000 ಕ್ಕೂ ಮೊದಲು ಪುನರ ವಸತಿ ಕೇಂದ್ರಕ್ಕೆ ಸ್ಥಳಾಂತರ ಗೊಂಡಿರುವರು.

<u>ಯಲಮಾಮಡಿ ಕೇಂದ್ರ:– 1 ಮತ್ತು 2:–</u> ಈ ಕೇಂದ್ರದ ಪುನರವಸತಿ ಕಾಮಗಾರಿಗಳು 93–94ರ ಪೂರ್ವದಲ್ಲಿ ಅನುಮೋದಿತ ಲೇಔಟನಂತೆ ಪೂರ್ಣಗೊಂಡಿದ್ದು ನಿರಾಶ್ರಿತರಿಗೆ ಹಕ್ಕು ಪತ್ರ ವಿತರಣೆ ಆಗಿದ್ದು ನಿರಾಶ್ರಿತರು 93–94 ರಲ್ಲಿ ಪುನರವಸತಿ ಕೇಂದ್ರಕ್ಕೆ ಸ್ಥಳಾಂತರಗೊಂಡಿರುವರು.

<u>ಗಡಿಲಿಂಗದಳ್ಳಿ:– ಕೇಂದ್ರ 3:–</u> ಈ ಪುನರವಸತಿ ಕೇಂದ್ರದಲ್ಲಿ ಅನಮೋದಿತ ಲೇಔಟನಂತೆ ಕಾಮಗಾರಿಗಳು ಅಂದರೆ ರಸ್ತೆ, ನೀರು ಸರಬರಾಜು, ವಿದ್ಯುತ್ತಿಕರಣ, ಕೂಡುರಸ್ತೆ, ಸರಕಾರಿ ಕಟ್ಟಡಗಳು, ಮಂದಿರಗಳು ಪೂರ್ಣಗೊಂಡಿದ್ದು ನಿರಾಶ್ರಿತರು ಇನ್ನು ಸ್ಥಳಾಂತರಗೊಂಡಿರುವುದಿಲ್ಲ. ಪ್ರಸ್ತುತ ಹಕ್ಕು ಪತ್ರಗಳು ತಯಾರಾಗಿದ್ದು ಮಾನ್ಯ ಶಾಸಕರಿಂದ ವಿತರಿಸುವ ಹಂತದಲ್ಲಿವೆ.

**ಚನ್ನೂರು:–** ಈ ಪುನರವಸತಿ ಕೇಂದ್ರದಲ್ಲಿ ಅನುಮೋದಿತ "ಲೇಔಟ" ನಂತೆ ಕಾಮಗಾರಿಗಳು ಪೂರ್ಣಗೊಂಡಿದ್ದು ನಿರಾಶ್ರಿತರು 2000 ಪೂರ್ವದಲ್ಲಿ ಪುನರವಸತಿ ಕೇಂದ್ರಕ್ಕೆ ಸ್ಥಳಾಂತರಗೊಂಡಿರುವರು.

ಮೇಲಿನ ಎಲ್ಲಾ ಪುನರವಸತಿ ಕೇಂದ್ರದ ಕಾಮಗಾರಿಗಳು ಪೂರ್ಣಗೊಂಡು 15–20 ವರ್ಷ ಕಳೆದಿರುವುದರಿಂದ ಅಲ್ಲಲ್ಲಿ ರಸ್ತೆ, ಸಿ.ಡಿ. ಕಾಮಗಾರಿಗಳು, ವಿದ್ಯುತ್ ಕಂಬಗಳ ಕಾಮಗಾರಿಯ ನ್ಯೂನತೆಗಳು ಕಂಡು ಬಂದಿರುತ್ತವೆ ಹಾಗೂ ಅವುಗಳನ್ನು ದುರಸ್ತಿಗೊಳಿಸಲು ಅನುದಾನವನ್ನು ನಿರ್ವಹಣಾ ಲೆಕ್ಕ ಶೀರ್ಷಿಕೆಯಡಿ ಪ್ರಸಕ್ತ ಸಾಲಿನಲ್ಲಿ ನಿಗಧಿಪಡಿಸಲಾಗಿದೆ. ಇವು ಹಳೆಯ ಪುನರ್ವಸತಿ ಕೇಂದ್ರಗಳಾಗಿದ್ದು, ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳಿಗೆ ಹಸ್ತಾಂತರಿಸಲು ಕ್ರಮವಹಿಸಲಾಗುವುದು.